## ಮಾತು-ಕತೆ

ಹಳ್ಳಿಯ ಹುಡುಗನಾದ ನನಗೆ ಶಾಲಾ ದಿನಗಳಲ್ಲೇ ಸಿನಿಮಾ ಎಂದರೆ ವಿಶೇಷ ಆಕರ್ಷಣೆಯಿತ್ತು. ನನಗೆ ಮಾತ್ರ ಅಲ್ಲ; ಹಳ್ಳಿಗರಿಗೆ ಸಿನಿಮಾ ಅನ್ನೋದು ಏನೋ ಪವಾಡ ಸದೃಶ ಪ್ರಕಾರವಾಗಿ ಅಂದಿನ ದಿನಗಳಲ್ಲಿ ಕಾಣುತ್ತಿತ್ತು. ಯಾಕೆಂದರೆ, ನಾವೆಲ್ಲ ಅಂದಿನ ದಿನಗಳಲ್ಲಿ ಹೆಚ್ಚೆಂದರೆ 'ಬಯಲಾಟ'ದ ನಾಟಕ ಪ್ರದರ್ಶನ ಕಂಡವರು, ಅದರಲ್ಲಿ ಭಾಗವಹಿಸಿದವರು. ಹೀಗಿರುವಾಗ ಒಮ್ಮೆ ನಮ್ಮ ತಾಲ್ಲೂಕು ಕೇಂದ್ರವಾದ ಸಿರಾಕ್ಕೆ ಬಂಧುಗಳ ಮನೆಗೆ ಹೋಗಿದ್ದೆವು. ಅದೂ ಎತ್ತಿನಬಂಡಿಯಲ್ಲಿ. ಅಲ್ಲಿ ನಾನು ಟೂರಿಂಗ್ ಟಾಕೀಸಿನಲ್ಲಿ 'ಕನ್ಯಾದಾನ' ಎಂಬ ಕನ್ನಡ ಸಿನಿಮಾ ನೋಡಿದೆ. ಇದು ನಾನು ನೋಡಿದ ಮೊದಲ ಸಿನಿಮಾ. ಸೊಸೆಯು ಕಪ್ಪು ಬಣ್ಣದವಳೆಂದು ಅತ್ತೆ ಹೀಯಾಳಿಸುವ ಮತ್ತು ಬಣ್ಣ ಮುಖ್ಯವಲ್ಲ ಎಂಬ ಸಂದೇಶ ಸಾರುವ ಸಿನಿಮಾ. ಸುಮಾರು ಅರವತ್ತು ವರ್ಷಗಳ ಹಿಂದೆ ನೋಡಿದ ಈ ಸಿನಿಮಾದ ಹಾಡು ಈಗಲೂ ನೆನಪಿದೆ; 'ಬಣ್ಣದಲ್ಲೇನಿದೆಯೊ ಬೆಡಗು! ಹೆಣ್ಣಿಗೆ ಗುಣವೇ ಚಿನ್ನದ ಮೆರುಗು!' ಎಂದು ಆ ಹಾಡು ಆರಂಭವಾಗುತ್ತದೆ. ಈ ಸಿನಿಮಾ ನೋಡಿದಾಗಿನಿಂದ ಜಾತ್ರೆಗಳಲ್ಲಿ, ಗಡಿಭಾಗದ ಹಾರೋಗೆರೆಯಲ್ಲಿ, ಟೂರಿಂಗ್ ಟಾಕೀಸ್‌ಗಳಲ್ಲಿ ಸಿನಿಮಾ ನೋಡುತ್ತ ಬಂದೆ. ನಾನು ಹೆಚ್ಚು ಆಕರ್ಷಿತನಾಗಿ ನೋಡಿದ್ದು ಕನ್ನಡದ ರಾಜಕುಮಾರ್ ಮತ್ತು ತೆಲುಗಿನ ಎ. ನಾಗೇಶ್ವರರಾವ್ ಸಿನಿಮಾಗಳನ್ನು. ಹೀಗೆ ನೋಡುತ್ತ ನಾನೂ ಒಬ್ಬ ನಟನಾಗಬೇಕು ಅನ್ನಿಸಿತು. ಕಾಲೇಜಿಗೆ ಬರುವ ವೇಳೆಗೆ ನಾಟಕಗಳಲ್ಲಿ ಅಭಿನಯಿಸಿದ್ದೆ. ಸಿನಿಮಾ ಹೀರೊಗಳ ರೀತಿಯೇ ಕತ್ತಿವರಸೆ ಮಾಡೋದನ್ನ ನನ್ನ ಚಿಕ್ಕ ಅಣ್ಣನ ಜೊತೆ ಪ್ರಯೋಗಿಸಿದ್ದೆ. ಮರದ ತೆಳುವಾದ ತುಂಡಿನಲ್ಲಿ ಕತ್ತಿ ಮಾಡಿ ಇಬ್ಬರೂ 'ಫೈಟ್' ಮಾಡುತ್ತಿದ್ದೆವು. ಆಯತಪ್ಪಿ ಹಣೆಗೂ ಹೊಡೆದುಕೊಂಡಿದ್ದೆವು.

ಮುಂದೆ ಎಂ.ಎ. ಓದಲು ಬೆಂಗಳೂರಿಗೆ ಬಂದಾಗ ನಟನಾಗುವ ಬದಲು ಇಡೀ ಸಿನಿಮಾವನ್ನೇ 'ಸೃಷ್ಟಿ' ಮಾಡುವ ಮುಖ್ಯಸ್ಥನಾದ ನಿರ್ದೇಶಕ ಆಗಬೇಕೆನ್ನಿಸಿತು. ಈ ಆಸೆಗೆ ಅನುಗುಣವಾಗಿ ಅನೇಕ ಪುಸ್ತಕಗಳನ್ನು ಓದಿದೆ. ಎಲ್ಲ ರೀತಿಯ ಸಿನಿಮಾಗಳನ್ನು ನೋಡುತ್ತ ಪುಸ್ತಕದ ಓದಿನ ಜೊತೆಯಿಟ್ಟು ವಿಶ್ಲೇಷಣೆ ಮಾಡಿಕೊಳ್ಳತೊಡಗಿದೆ. ಪ್ರಸಿದ್ಧ ನಿರ್ದೇಶಕ ಎನ್. ಲಕ್ಷ್ಮೀನಾರಾಯಣ ಅವರು (ಅಬಚೂರಿನ ಪೋಸ್ಟಾಫೀಸು, ಉಯ್ಯಾಲೆ, ಬೆಟ್ಟದ ಹೂವು – ಖ್ಯಾತಿಯ ನಿರ್ದೇಶಕ) ಕೆಲವು ಪುಸ್ತಕಗಳನ್ನು ಸೂಚಿಸಿದರು. ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ನಿರ್ದೇಶನಕ್ಕಾಗಿ ವ್ಯಾಸಂಗ ಮಾಡಿದ ಮೊದಲ ಕನ್ನಡಿಗ, ನಮ್ಮ ಜಿಲ್ಲೆಯ ಕೆ.ಎಂ. ಶಂಕರಪ್ಪನವರ ಪರಿಚಯದಿಂದ ಅನೇಕ ವಿಷಯ ಕಲಿತೆ. ನಮ್ಮ ತಾಲ್ಲೂಕಿನವರೇ ಆದ ಖ್ಯಾತ ನಿರ್ದೇಶಕ ಸಿದ್ದಲಿಂಗಯ್ಯನವರ ಒಡನಾಟವೂ ಪ್ರಯೋಜನಕ್ಕೆ ಬಂತು. ಅನೇಕ ಸಿನಿಮಾಗಳ ಚಿತ್ರೀಕರಣವನ್ನು ಹತ್ತಿರದಿಂದ ನೋಡಿದೆ. ಹೀಗೆ ನಾನು ಸಿನಿಮಾ ನಿರ್ದೇಶನದ ವ್ಯಾಕರಣವನ್ನು ಅಥವಾ ವ್ಯಾಕರಣ ಮೀರಿದ ಕಲೆಯನ್ನು ತಕ್ಕಮಟ್ಟಿಗೆ ಕಲಿತೆ. ನನ್ನ ಮೊದಲ ಸಿನಿಮಾ 'ಒಂದು ಊರಿನ ಕತೆ'ಯು ಅಲ್ಲಿವರೆಗೆ ಕಲಿತದ್ದರ ಪ್ರಥಮ ಪ್ರಯೋಗವಾಯಿತು.

ನಿಜ, ಸಾಹಿತ್ಯ ಮತ್ತು ಸಿನಿಮಾ ಎರಡೂ ವಿಭಿನ್ನ ಮಾಧ್ಯಮಗಳು. ಎರಡೂ ಮಾಧ್ಯಮಗಳ ಅಭಿವ್ಯಕ್ತಿ ವಿಧಾನವೇ ಬೇರೆ ಬೇರೆ. ನಾನು ಕಾಲು ಶತಮಾನದ ಹಿಂದೆಯೇ ಸಿನಿಮಾವನ್ನು 'ಕಲೋದ್ಯಮ' ಎಂದು ಹೆಸರಿಸಿ ಪರಿಕಲ್ಪನಾತ್ಮಕವಾಗಿ ವಿವರಿಸಿದ್ದೆ. ಸಿನಿಮಾವು ಬಂಡವಾಳವನ್ನು ಹೆಚ್ಚು ಬಯಸುವ ಮಾಧ್ಯಮ. ಬಂಡವಾಳದ ಹೆಚ್ಚು ತೊಡಗಿಸುವಿಕೆಯಿಂದ ಅದು ಉದ್ಯಮವಾಗುತ್ತದೆ. ಆದರೆ, ಕಲೆಯೆಂಬುದು ಕೂಡ ಅಷ್ಟೇ ಮುಖ್ಯ. ಹೀಗಾಗಿ, ನನ್ನ ಪರಿಕಲ್ಪನೆಯಲ್ಲಿ ಅದು 'ಕಲೋದ್ಯಮ'. ಸಾಹಿತ್ಯದ ಪ್ರಕಟಣೆಗೂ ಒಂದಿಷ್ಟು ಹಣ ಬೇಕಾದರೂ ಸಿನಿಮಾ ನಿರ್ಮಾಣಕ್ಕೆ ಬೇಕಾದಷ್ಟು ಬಂಡವಾಳ ಖಂಡಿತ ಬೇಕಿಲ್ಲ. ಸಾಹಿತ್ಯ ಮತ್ತು ಸಿನಿಮಾ 'ಸೃಷ್ಟಿ'ಯಲ್ಲಿರುವ ಈ ಮೂಲ ವ್ಯತ್ಯಾಸವೇ ಎರಡರ ಅಭಿವ್ಯಕ್ತಿ ವಿಧಾನ ಮತ್ತು ವಿನ್ಯಾಸಗಳಲ್ಲಿ ಕೆಲಸ ಮಾಡಿದೆ. ನಾನು ಸಾಹಿತ್ಯ ಸೃಷ್ಟಿಯಲ್ಲಿ